**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.**

**ಎಸ್.ಸಿ ಸಂಖ್ಯೆ:– 252/2022**

| | | |
|---|---|---|
| **ಸಾಕ್ಷಿದಾರನ ಹೆಸರು** | : ಸೋಮಶೇಖರ್ | **ಪಿ.ಡಬ್ಲ್ಯೂ:–6** |
| **ತಂದೆಯ ಹೆಸರು** | : ಲೇಟ್ ಪೈಲ್ವಾನ್ ಕುಳ್ಳಣ್ಣ | **ಸಿ.ಡಬ್ಲ್ಯೂ:–4** |
| **ವಯಸ್ಸು** | : 72 ವರ್ಷ | |
| **ಉದ್ಯೋಗ** | : ಹಸಿ ಹುಲ್ಲು ವ್ಯಾಪಾರ | |
| **ವಾಸಸ್ಥಳ** | : ಮೈಸೂರು. | |

**ಸಾಕ್ಷಿಯನ್ನು ಈ ದಿನ ದಿ:02.04.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ:– ಮಾನ್ಯ ಸರ್ಕಾರಿ ಅಭಿಯೋಜಕರಿಂದ:–**

**1.** ನಾನು ದಾಖಲೆಗೆ ಸಹಿ ಮಾಡುತ್ತೇನೆ. ಸಾಕ್ಷಿಯು ಸಹಿ ಇರುವ ತನ್ನ ದಾಖಲೆಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ಅಮಾನತ್ತು ಮಹಜರ್ ಆಗಿದ್ದು, ಅದನ್ನು ಈಗಾಗಲೇ ನಿಶಾನೆ ಪಿ–8 ಎಂದು ಗುರುತಿಸಲಾಗಿರುತ್ತದೆ. ವರ್ಷ ನೆನಪಿಲ್ಲ. ಆದರೆ ಸದರಿ ದಾಖಲೆಗೆ ಸಹಿಯನ್ನು ಸಿಸಿಬಿ ಕಚೇರಿಯಲ್ಲಿ ಮಾಡಿರುತ್ತೇನೆ. ಯಾವ ಕಾರಣಕ್ಕೆ ಸಹಿ ಪಡೆದಿರುತ್ತಾರೆ ಎಂದು ತಿಳಿದಿರುವುದಿಲ್ಲ. ಸಹಿ ಮಾಡಲು ಹೇಳಿದರು ಸಹಿ ಮಾಡಿರುತ್ತೇನೆ.

**2.** ನಾನು ಎಲ್ಲಿಗೂ ಕೂಡ ಹೋಗಿರುವುದಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿ, ನನ್ನ ಹೇಳಿಕೆಯನ್ನು ದಾಖಲಿಸಿಕೊಂಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಕೋರಿದ್ದು, ಸದರಿಯವರ ಕೋರಿಕೆಯನ್ನು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಿದೆ.)

**ಪಾಟೀ ಸವಾಲುಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

**3.** ದಿಃ- 27.08.2014 ರಂದು ಬೆಳಿಗ್ಗೆ 6.15 ಕ್ಕೆ ಟೆರಿಷನ್ ಕಾಲೇಜಿನ ಬಳಿ ಇರುವ ಬಸ್ ನಿಲ್ದಾಣದ ಹಿಂಬಾಗ ಪೊಲೀಸರು ಬಂದಿದ್ದು, 4 ಜನ ಅಸಾಮಿಗಳು ಅನುಮಾನಸ್ಪದವಾಗಿ ನಿಂತಿರುವುದು ನೋಡಿ ಅವರನ್ನು ಹಿಡಿದುಕೊಂಡು ವಿಚಾರಿಸಿ ಅವರ ಅಂಗಶೋಧನೆ ಮಾಡಬೇಕಾಗಿದ್ದು ಆ ಸಮಯದಲ್ಲಿ ನನ್ನನ್ನು ಪಂಚನಾಗಿ ಸಹಕರಿಸುವಂತೆ ಕೇಳಿಕೊಂಡಾಗ ನಾನು ಅದಕ್ಕೆ ಒಪ್ಪಿದ್ದು, ನನ್ನ ಜೊತೆ ಚಾ.ಸಾಃ5 ಅನಿಲ್ ಕುಮಾರ್ ರವರಿದ್ದು, ನಮ್ಮಗಳ ಸಮಕ್ಷಮ 2 ನೇ ಆರೋಪಿಯ ಅಂಗಶೋದನೆ ಮಾಡಿದಾಗ ಆತನ ಬಳಿ ಒಂದು ಪ್ಲಾಸ್ಟಿಕ್ ಚೀಲ ಇದ್ದು, ಅದರಲ್ಲಿ ಒಂದು ಕಬ್ಬಿಣದ ರಾಡ್ ಕಟ್ ಮಾಡುವ ಕಟರ್, ಒಂದು ಹಾರೆ, ಒಂದು ಸ್ಕ್ರ್ಯೂ ಡ್ರೈವರ್ ಇದ್ದು, 1 ನೇ ಆರೋಪಿಯ ಅಂಗಶೋದನೆ ಮಾಡಿದಾಗ, ಆತನ ಬಳಿ ಒಂದು ಪ್ಲಾಸ್ಟಿಕ್ ಕವರ್ ಇದ್ದು, ಅದರಲ್ಲಿ ಅರ್ಧ ಗ್ರಾಂ ತೂಕದ 9 ಚಿನ್ನದ ತಾಳಿಗಳು, 3 ಗ್ರಾಂ ತೂಕದ ಒಂದು ಚಿನ್ನದ ತಾಳಿ ಇದ್ದು ಅವುಗಳ ಬಗ್ಗೆ ವಿಚಾರಿಸಿದಾಗ, ಅವುಗಳನ್ನು ಅವರು ಕಾಳಿಕಾಂಬ ದೇವಸ್ಥಾನದಿಂದ ಕಳುವು ಮಾಡಿರುವುದಾಗಿ ಒಪ್ಪಿಕೊಂಡಿರುತ್ತಾರೆ. 3 ನೇ ಆರೋಪಿಯನ್ನು ಅಂಗಶೋದನೆ ಮಾಡಿದಾಗ ಆತನ ಬಳಿ ಒಂದು ಮೊಬೈಲ್ ಪೋನ್ ಸಿಕ್ಕಿರುತ್ತದೆ. ಸದರಿ ವಸ್ತುಗಳನ್ನು ನಮ್ಮ ಸಮಕ್ಷಮ ಅಮಾನತ್ತು ಮಹಜರ್ ಜರುಗಿಸಿ ಅಮಾನತ್ತುಪಡಿಸಿಕೊಂಡಿರುತ್ತಾರೆ. ಸದರಿ ಮಹಜರಿಗೆ ನಾನು ಎಲ್ಲ ವಿಚಾರ

ತಿಳಿದುಕೊಂಡು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆ ಭಾಗವನ್ನು ನಿಶಾನೆ ಪಿ–12 ಎಂದು ಗುರುತಿಸಲಾಯಿತು. ಮಹಜರ್ ಬಗ್ಗೆ ಎಲ್ಲಾ ವಿಚಾರ ತಿಳಿದಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ–</u>**

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳುತ್ತಾರೆ.

<u>ಮರುವಿಚಾರಣೆಃ– ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೇ ಸ ಇ ಎ ಒ**

**Sd/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**
**ಮೈಸೂರು.**